ಬಂದ ತನ್ನ ಬುದ್ಧಿಶೂನ್ಯತೆಯ ಬಗ್ಗೆ ತಾನೆ ಆಕ್ಷೇಪಿಸಿಕೊಂಡಳು. ಬ್ರೆಡ್ಡಿನ ತುಂಡನ್ನು ತಿಂದು ಮುಗಿಸಿ ಮತ್ತೂ ಇಣುಕಿ ನೋಡುವ ಕಪ್ಪನೆಯ ಚೂಪುಮೂತಿಯ ನೋಟದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಅವಳು ತಲೆದಿಂಬಿನಲ್ಲಿ ಮುಖವನ್ನು ಮುಚ್ಚಿಕೊಂಡಳು. ಅರ್ಧದಷ್ಟು ಹೊಲಿದಿದ್ದ ಹೂಗಳು ಅವಳ ಕೆನ್ನೆಗಳನ್ನು ಚುಂಬಿಸಿದವು.

ಸೂಜಿ, ದಾರ ಪೆಟ್ಟಿಗೆಯೊಳಗಿದೆ. ಬೇಕಾದರೆ ತಲೆದಿಂಬಿನ ಕವರಿನ ಮೇಲಿನ ಚಿತ್ರಗಳನ್ನು ಹೊಲಿದು ಮುಗಿಸಬಹುದು. ಆರ್ಧ ಹೊಲಿದ ಕವರನ್ನು ತಲೆದಿಂಬಿಗೆ ಬೇಕೂಂತಲೆ ಹಾಕಲಾಗಿತ್ತು. ಅದನ್ನು ಪೂರ್ತಿಗೊಳಿಸಲು ತನಗೆ ಸಾಧ್ಯವಾಗುವುದೆ ಇಲ್ಲ. ಪೂರ್ಣಗೊಳಿಸಬೇಕಾಗಿದ್ದ ಬಣ್ಣಗಳ ಬಗ್ಗೆ ಅವಳು ಯೋಚಿಸ ತೊಡಗಿದಳು.

ಆಗಲೆ ಹೊರಗಡೆ ಗಲಾಟೆ ಶುರು ಆದ ಹಾಗೆ ಕಾಣಿಸಿತು.


ಹಾಸಿಗೆಯಲ್ಲಿ ಒತ್ತಿ ಮಲಗಿಕೊಂಡಳು. ನಂತರ ಹಾಸಿಗೆ ಬೇಡವಾಯ್ತು. ಫ್ಯಾನು ತಿರುಗದಂತಾಯಿತು. ಒಳಗಡೆಯ ಬಿಸಿ ಹೆಚ್ಚಾಯಿತು.

ಅವಳು ಎದ್ದು ಕಿಟಕಿಯ ಕರ್ಟನುಗಳನ್ನು ಬದಲಾಯಿಸಿದಳು.

ಕಾಗೆಗಳು ಗಂಟಲು ಹರಿದುಕೊಂಡು ಕಿರುಚಿಕೊಂಡವು.

ಮರಳಿನ ಪದರಗಳಲ್ಲೂ ತೆಂಗಿನ ಗರಿಗಳಲ್ಲೂ ಬೀಗ ಹಾಕಿ ಮುಚ್ಚಿಟ್ಟಿರುವ ಔಟ್ ಹೌಸಿನ ಮೇಲೂ ಗಾಜು ಅಳವಡಿಸಿರುವ ಕಲ್ಲುಗೋಡೆಗಳಲ್ಲೂ... ಎಲ್ಲ ಕಡೆಗಳಲ್ಲೂ ಅವುಗಳು ಹಾರಾಡುತ್ತಿವೆ.

ತುರುತುರಾ ಎಂದು ಗಟ್ಟಿಯಾಗಿ ಶಬ್ದಗಳು ಉಂಟಾಗುತ್ತಿವೆ. ಬೇತಾಳದ ನೃತ್ಯಕ್ಕೆ ಹಿನ್ನೆಲೆ ಸಂಗೀತದಂತೆ ಅವು ಒಂದುಗೂಡಿದವು.



ವಿದ್ಯುತ್ ತಂತಿಯನ್ನು ಸ್ಪರ್ಶಿಸಿ ನಂತರ ಕೆಳಕ್ಕೆ ಬಿದ್ದ ಸಂಗಾತಿಯ ಬಗ್ಗೆ ಅವುಗಳ ಆಕ್ರಂದನ ಮುಗಿಲು ಮುಟ್ಟಿರುವುದನ್ನು ಕಂಡು ಅವಳು ವಿಸ್ಮಿತಳಾದಳು.

ತನ್ನ ತಲೆಬುರುಡೆಯೊಳಗಿನಿಂದ ಕಿರುಚಿಕೊಳ್ಳುತ್ತಿರುವಂತಿದೆ.

ಅವಳು ಕಿಟಕಿಯ ಸರಳುಗಳಿಗೆ ತನ್ನ ಮುಖವನ್ನು ಅದುಮಿದಳು. ಬೆರಳುಗಳು ಕಿವಿಯೊಳಗೆ ಗಟ್ಟಿಗೊಂಡವು. ಇಲ್ಲ, ಏನು ಮಾಡೊದಿಕ್ಕೂ ಆಗುತ್ತಿಲ್ಲ. ತೆರೆದ ಕಣ್ಣುಗಳಿಂದ ಶಬ್ದವು ಒಳಗಡೆಗೆ ಹಾದು ಬರುತ್ತಿದೆ ಎಂದನಿಸಿತು.

ಆದರೆ, ಕಣ್ಣುಗಳನ್ನು ಮುಚ್ಚಲು ಸಾಧ್ಯವಾಗ್ತಾ ಇಲ್ಲ.